

# ಆಧ್ಯಾತ್ಮಿಕ ಪ್ರೇಮದ ಸುಗಂಧ

## ಹೃದಯ ತನ್ನ ಅಸ್ತಿತ್ವದ ಉದ್ದೇಶವನ್ನು ಅರಿತಾಗ


ಪೂಜ್ಯ ದಾಜಿಯವರ


71ನೇ ಜನ್ಮದಿನೋತ್ಸವದ ಸಂದರ್ಭದಲ್ಲಿ ನೀಡಿದ ಸಂದೇಶ

ಸೆಪ್ಟೆಂಬರ್ 28, 2026, ಕಾನ್ಹಾ ಶಾಂತಿವನಂ



# ಆಧ್ಯಾತ್ಮಿಕ ಪ್ರೇಮದ ಸುಗಂಧ

## ಹೃದಯ ತನ್ನ ಅಸ್ತಿತ್ವದ ಉದ್ದೇಶವನ್ನು ಅರಿತಾಗ

ಆತ್ಮೀಯ ಸ್ನೇಹಿತರೆ,

ಪ್ರತಿಯೊಂದು ಆಧ್ಯಾತ್ಮಿಕ ಪರಂಪರೆಯೂ, ಪ್ರೇಮವೇ ಪಯಣದ ತಿರುಳೆಂದು ಹೇಳುತ್ತದೆ. ನಾವು ತಲೆದೂಗುತ್ತ, ನಮಗೆ ತಿಳಿಯಿತೆಂದು ಭಾವಿಸುತ್ತೇವೆ, ಆದರೆ ಅದು ನಿಜವೆ? ಈ ಸಂದೇಶದಲ್ಲಿ, ಪ್ರೇಮ ಅರಳುತ್ತ ತನ್ನ ಸುಗಂಧವನ್ನು ಬೀರುವಲ್ಲಿ ಅನಾವರಣಗೊಳ್ಳುವ ಪ್ರಗತಿಯ ಕುರಿತಾಗಿ ತಿಳಿದುಕೊಳ್ಳಲಿದ್ದೇವೆ. ಮೊದಲಿಗೆ, ಸುಗಂಧದ ಸ್ವಭಾವವೇನು? ಹೂವೊಂದು ತಾನು ಸುಗಂಧಮಯವಾಗಬೇಕೆಂದು ನಿರ್ಧರಿಸುತ್ತದೆಯೆ? ಇಲ್ಲ. ಹೂವು ಹೇಗಿರಬೇಕೊ ಹಾಗಾದಾಗ, ಸಹಜವಾಗಿಯೆ ಸುಗಂಧ ಹೊರಸೂಸುತ್ತದೆ. ಸುಗಂಧ ತುಂಬಿ ತುಳುಕುವಂಥದ್ದು. ಪ್ರೇಮವೂ ಸಹ, ಆಧ್ಯಾತ್ಮಿಕ ಅರ್ಥದಲ್ಲಿ, ತುಂಬಿ ತುಳುಕುವಂಥದ್ದು.

ಹಿಂದಿನ ಒಂಬತ್ತು ಸಂದೇಶಗಳಲ್ಲಿ ನಾವು 'ವಿಭಜಿತ ಹೃದಯ' ದಿಂದ ಆರಂಭಿಸಿ, ನಂತರ ಪೂರ್ಣತೆ ಹಾಗು ಅರಳುವಿಕೆಯನ್ನು ನಿಲ್ಲಿಸುವ ತಡೆಗಳನ್ನು ಅರಿತು, ಅವುಗಳಿಂದ ಹೊರಬರುವ ಬಗ್ಗೆ ತಿಳಿದುಕೊಂಡೆವು. ಆ ಅಡಚಣೆಗಳೆಂದರೆ, ಉದ್ದೇಶವನ್ನು ನಿಶ್ಚೇಷ್ಟಿತಗೊಳಿಸುವ ಜಡತ್ವ, ಬುನಾದಿಯನ್ನು ದುರ್ಬಲಗೊಳಿಸುವ ಸಂಶಯ, ಸೀಮಾರೇಖೆಯನ್ನು ನಿರ್ಮಿಸುವ ಗರ್ವ, ನಮ್ಮ ದೃಷ್ಟಿಯನ್ನು ಆಚೀಚೆ ಹೊರಳಿಸುವ ಮತ್ಸರ, ನಮ್ಮ ಗ್ರಹಿಕೆಯನ್ನು ಮರೆಮಾಚುವ ಪೂರ್ವಗ್ರಹ ಹಾಗು ಒಳಗಿನಿಂದ ಬಾಗಿಲನ್ನು ಭದ್ರಗೊಳಿಸುವ ಭಯ. 'ತನ್ನ ಹೆಸರನ್ನು ಕಲಿತ ನದಿ' ಯಲ್ಲಿ ಬಾಗಿಲು ತೆರೆದಾಗ, ಭಯವು ವಿಶ್ವಾಸವಾಗಿ ಬದಲಾಯಿತು. ನಂತರ,

'ಬೀಜಕ್ಕಿಂತ ಮುಖ್ಯವಾದುದು ಮಣ್ಣು' ಸಂದೇಶದಲ್ಲಿ ವಿಶ್ವಾಸವು ಆಂತರಿಕ ಕ್ಷೇತ್ರವನ್ನು ಸಿದ್ಧಗೊಳಿಸಿತು. ಈ ಹತ್ತನೆಯ ಸಂದೇಶ ಮುಂದಿನ ಸಹಜ ಚಲನೆಯ ಕುರಿತಾಗಿದೆ. ವಿಶ್ವಾಸವು ಹೃದಯವನ್ನು ಗ್ರಹಣಶೀಲಗೊಳಿಸುವುದರಿಂದ ಹೇಗೆ ಕೃಪಾವರ್ಷವನ್ನು ಸಾಧ್ಯವಾಗಿಸುತ್ತದೆಯೆಂದು ಇಲ್ಲಿ ನಾವು ಅನ್ವೇಷಿಸುತ್ತೇವೆ. ಕೃಪೆ ತುಂಬುವ ಎಲ್ಲವೂ ಪ್ರೇಮವಾಗುತ್ತದೆ. ಅಂತೆಯೆ ತನ್ನ ಮೂಲವನ್ನು ಗುರುತಿಸುವ ಪ್ರೇಮ ಭಕ್ತಿಯಾಗುತ್ತದೆ.

'ಪ್ರೇಮ' ವೆಂಬುದು ವ್ಯಾಪಕವಾಗಿ ಬಳಕೆಯಾಗುವ, ಅಷ್ಟೇ ತಪ್ಪಾಗಿ ಅರ್ಥೈಸಿಕೊಂಡಿರುವ ಪದ. ಅದು, ತನ್ನ ನವಜಾತ ಶಿಶುವನ್ನು ಎತ್ತಿಕೊಳ್ಳುವ ತಾಯಿಯ ಭಾವನೆಯನ್ನು, ಪ್ರಥಮ ಆಕರ್ಷಣೆಯ ಉತ್ಸಾಹದಲ್ಲಿರುವ ಯುವಕನ ಭಾವನೆಯನ್ನು, ರಾಷ್ಟ್ರದ ಬಗ್ಗೆ ದೇಶಭಕ್ತನಲ್ಲಿರುವ ಭಾವನೆಯನ್ನು, ದೈವದ ಬಗ್ಗೆ ಭಕ್ತನ ಭಾವನೆಯಲ್ಲದೆ, ಒಂದು ಲೋಟ ರುಚಿಕರ ಕಾಫಿಯನ್ನು ಸವಿಯುವಾಗಲೂ ಸಹ ನಮ್ಮೊಳಗಿನ ಸಂತೋಷವನ್ನು ವಿವರಿಸುತ್ತದೆ. ನಾವು ಈ ಪದಬಳಕೆಯನ್ನು ಎಷ್ಟು ವ್ಯಾಪಕವಾಗಿ ಹಿಗ್ಗಿಸಿದ್ದೇವೆಂದರೆ, ಅದು ಬಹುತೇಕ ಎಲ್ಲವನ್ನೂ ಒಳಗೊಂಡಿದೆ.

ಹಾಗಾದರೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರೇಮವೆಂದರೇನು? ನಮ್ಮ ನಂಬಿಕೆ, ನಮ್ಮ ಪಥ ಅಥವಾ ದೇವರ ಬಗೆಗಿನ ನಮ್ಮ ಪರಿಕಲ್ಪನೆಯನ್ನು ಹಂಚಿಕೊಳ್ಳದವರನ್ನು ನಾವು ಹೇಗೆ ಗೌರವಿಸುತ್ತೇವೆ ಎಂಬುದು ಆಧ್ಯಾತ್ಮಿಕ ಪ್ರೇಮದ ಸರಳ ಪರೀಕ್ಷೆ. ಅವರು ಬೇರೆ ರೀತಿಯಾಗಿ ಆರಾಧಿಸುವ ಮಾತ್ರಕ್ಕೆ ನಾವು ಅವರನ್ನು ಹೊರಗಿಟ್ಟರೆ, ನಮ್ಮೊಳಗೆ ಪ್ರೇಮವಿನ್ನೂ ಅರಳಿಲ್ಲ. ನಾವು ನಿಜವಾಗಿಯೂ ಭಗವಂತನನ್ನು ಪ್ರೇಮಿಸಿದರೆ, ಆತ ಸೃಷ್ಟಿಸಿದ ಜೀವಿಗಳನ್ನು ನಿರಾಕರಿಸಲಾರೆವು. ಇತರರನ್ನು ಸಹಿಸಿಕೊಳ್ಳುವುದು ಆರಂಭವಷ್ಟೆ. ಇತರರನ್ನು ಸ್ವೀಕರಿಸುವುದು ಆಳವಾದುದು. ಎಲ್ಲರಲ್ಲೂ ಅದೇ ಪವಿತ್ರ ಸತ್ತ್ವವನ್ನು ಗುರುತಿಸುವುದು ಪ್ರೇಮದ ಚಲನೆ.

ಹೃದಯವು ಗಹನ ಪರಿವರ್ತನೆಗೊಳಗಾದಾಗ ಆಧ್ಯಾತ್ಮಿಕ ಪ್ರೇಮ ಹೊರಹೊಮ್ಮುತ್ತದೆ. ಆ ಪರಿವರ್ತನೆಯು ಕೆಳಗಿನಂತೆ ಸೊಗಸಾದ ಕ್ರಮದಲ್ಲಿ ಅನಾವರಣಗೊಳ್ಳುತ್ತದೆ.

ತೀವ್ರ ಹಂಬಲದಿಂದ ಶ್ರದ್ಧೆ, ಅಲ್ಲಿಂದ ಗ್ರಹಣಶೀಲತೆ, ಅಲ್ಲಿಂದ ಕೃಪೆ, ಅಲ್ಲಿಂದ ಪ್ರೇಮ, ಅಲ್ಲಿಂದ ಭಕ್ತಿ.

ಪ್ರತಿಯೊಂದು ಹಂತವೂ ಮುಂದಿನದನ್ನು ಸಿದ್ಧಗೊಳಿಸುತ್ತದೆ. ಬೀಜದಲ್ಲಿ ಅಡಗಿದ ಹೂವು ಮತ್ತು ಹೂವಿನಲ್ಲಿ ಅಡಗಿದ ಸುಗಂಧದಂತೆಯೆ, ಪ್ರತಿಯೊಂದೂ ತನಗಿಂತ ಮುಂಚಿತವಾದ ಹಂತದಲ್ಲಿ ಅಡಗಿದೆ.

## ತೀವ್ರ ಹಂಬಲ - ಮೊದಲ ಚಲನೆ

ಧ್ಯಾನ ಹಾಗು ಭಗವಂತನಿಗಾಗಿ ಪ್ರಜ್ಞಾಪೂರ್ವಕ ಹುಡುಕಾಟ ಆರಂಭವಾಗುವ ಮೊದಲು, ಸಾಮಾನ್ಯವಾಗಿ ವ್ಯಾಕುಲತೆ ಉದ್ಭವಿಸುತ್ತದೆ. ಏನೋ ಕಳೆದುಕೊಂಡ ಭಾವ. ನಮಗೆ ಸುಖ–ಸೌಕರ್ಯ, ಸಾಧನೆ, ಕುಟುಂಬ, ಖ್ಯಾತಿ, ಜ್ಞಾನ ಮತ್ತು ಸಂತೃಪ್ತಿ ತರುವ ಎಲ್ಲವೂ ದೊರೆತಿರಬಹುದು, ಆದರೂ ವಿವರಿಸಲಾಗದ ನೋವೊಂದು ಒಳಗೇ ಕೊರೆಯುತ್ತದೆ.

ನಮ್ಮಲ್ಲಿ ಕೆಲವರು, ವ್ಯಸ್ತವಾಗುವುದು, ಹೆಚ್ಚು ಗಳಿಸುವುದು, ಪ್ರವಾಸ ಮಾಡುವುದು ಅಥವಾ ಮನೋರಂಜನೆಗಳ ಮೂಲಕ ಆ ಕೊರತೆಯನ್ನು ತುಂಬಲೆತ್ನಿಸುತ್ತೇವೆ. ಸಂಬಂಧಗಳು, ಸಾಧನೆಗಳು ಮತ್ತು ಆಧ್ಯಾತ್ಮಿಕ ಅನುಭವವನ್ನೂ ಸೇರಿದಂತೆ ಅನುಭವಗಳಿಗಾಗಿ ಅರಸುತ್ತೇವೆ. ಆದರೂ ಆ ತಳಮಳ ಪುನಃ ಕಾಡುತ್ತದೆ. ಈಗ, ಆ ತಳಮಳವೇ ಸಮಸ್ಯೆಯಲ್ಲದಿದ್ದರೆ? ಬದಲಿಗೆ ಅದೊಂದು ಆಹ್ವಾನವಾಗಿದ್ದರೆ?

ಮಣ್ಣಿನಲ್ಲಿ ಬಿತ್ತಿದ ಬೀಜವೊಂದು ತಾನೆಂದಿಗೂ ಕಾಣದ ಸೂರ್ಯನಿಗೆ ಸ್ಪಂದಿಸುತ್ತದೆ. ಅದರೊಳಗಿನ ಒಂದು ಅದೃಶ್ಯ ಪ್ರಜ್ಞೆ ಮೇಲ್ಮುಖವಾಗಿ ಚಲಿಸಿ, ಬೆಳವಣಿಗೆ ಹಾಗು ಪರಿಪೂರ್ಣತೆಯತ್ತ ಸಾಗಬೇಕೆಂಬುದನ್ನು ಅರಿತಿರುತ್ತದೆ. ನಮ್ಮೊಳಗಿನ ಅಂತಹ ಚಲನೆಯೇ 'ಹಂಬಲ'. ನಮ್ಮ ಗಮ್ಯವೇನೆಂದು ನಮಗೆ ತಿಳಿದಿರುವುದಿಲ್ಲ, ಆದರೂ ಯಾವುದೋ ಶಕ್ತಿಯೊಂದು ನಮ್ಮನ್ನು ಸೆಳೆಯುತ್ತಿರುತ್ತದೆ. ಜೀವನದಲ್ಲಿ ನಾವಿನ್ನೂ ಸ್ಪರ್ಶಿಸದ ಆಳವೊಂದಿದೆ ಎಂಬ ಅರಿವು ನಮಗಿರುತ್ತದೆ. ನಾವಿನ್ನೂ ಸಾಕಾರಗೊಳಿಸದ ಸತ್ಯ, ತಲುಪದ ನೆಲೆಯೊಂದಿದೆ. ಈ ಹಂಬಲದೊಂದಿಗೇ ನಮ್ಮ ಆಧ್ಯಾತ್ಮಿಕ ಪಯಣವು ಆರಂಭವಾಗುತ್ತದೆ. ಆ ಹಂಬಲವು ನಿರ್ದಿಷ್ಟ ದಿಸೆಯನ್ನು



ಹೃದಯವು ಗಹನ ಪರಿವರ್ತನೆಗೊಳಗಾದಾಗ ಆಧ್ಯಾತ್ಮಿಕ ಪ್ರೇಮ ಹೊರಹೊಮ್ಮುತ್ತದೆ. ಆ ಪರಿವರ್ತನೆಯು ಕೆಳಗಿನಂತೆ ಸೊಗಸಾದ ಕ್ರಮದಲ್ಲಿ ಅನಾವರಣಗೊಳ್ಳುತ್ತದೆ.
ತೀವ್ರ ಹಂಬಲದಿಂದ ಶ್ರದ್ಧೆ, ಅಲ್ಲಿಂದ ಗ್ರಹಣಶೀಲತೆ, ಅಲ್ಲಿಂದ ಕೃಪೆ, ಅಲ್ಲಿಂದ ಪ್ರೇಮ, ಅಲ್ಲಿಂದ ಭಕ್ತಿ.

ಕಂಡುಕೊಂಡಾಗ, ಅದು ಶ್ರದ್ಧೆಯಾಗಿ ಪರಿವರ್ತನೆಗೊಳ್ಳುತ್ತದೆ.

## ಶ್ರದ್ಧೆಯು ಹೃದಯವು ನೆಲೆಗೊಂಡ ಸ್ಥಳ

'ಬೀಜಕ್ಕಿಂತ ಮುಖ್ಯವಾದುದು ಮಣ್ಣು' ಸಂದೇಶದಲ್ಲಿ ಶ್ರದ್ಧೆಯ ಬಗ್ಗೆ ಮಾತನಾಡಿದ್ದೇವೆ. ಇದನ್ನು ಸಾಮಾನ್ಯವಾಗಿ 'ನಂಬಿಕೆ' (faith) ಎಂದು ಅನುವಾದಿಸಲಾಗುತ್ತದೆ, ಆದರೂ  ನಂಬಿಕೆ ಯು ಅದರ ಸಮೃದ್ಧ ಅರ್ಥವನ್ನು ಸಂಪೂರ್ಣವಾಗಿ ಹೊಮ್ಮಿಸುವುದಿಲ್ಲ. ಶ್ರದ್ಧೆಯೆಂದರೆ ಅಸಾಧ್ಯವಾದುದನ್ನು ನಂಬುವುದಕ್ಕಿಂತಲೂ ಹೆಚ್ಚಿನದು. ಇದು ನಿಷ್ಕ್ರಿಯ ಸ್ವೀಕಾರ, ಕುರುಡು ವಿಧೇಯತೆ ಅಥವಾ ಬುದ್ಧಿಯ ಜಡತ್ವಕ್ಕಿಂತ ಹೆಚ್ಚಿನದು. ಇದು ಇಡೀ ಇರುವಿಕೆಯ ಚಲನೆ. ಇದು ಹೃದಯವನ್ನು ನೆಲೆಗೊಳಿಸುವುದನ್ನು ಅಥವಾ ಸ್ಥಾಪಿಸುವುದನ್ನು ಸೂಚಿಸುತ್ತದೆ.

'ನಾನು ಯಾವುದನ್ನು ನಂಬುತ್ತೇನೆ?' ಎಂಬುದಕ್ಕಿಂತ 'ನನ್ನ ಹೃದಯವನ್ನು ನಾನು ಎಲ್ಲಿ ನೆಲೆಗೊಳಿಸಿದ್ದೇನೆ?' ಎಂಬುದು ಹೆಚ್ಚು ಅರ್ಥಪೂರ್ಣ. ನಾವು ದೇವರನ್ನು ನಂಬುವ ಜೊತೆಗೆ, ನಮ್ಮ ಹೃದಯವನ್ನು ಅಂತಸ್ತು–ಪ್ರತಿಷ್ಠೆಗಳ ಮೇಲೆ ಕೇಂದ್ರೀಕರಿಸಿರಬಹುದು. ಆಧ್ಯಾತ್ಮಿಕತೆಯ ಬಗ್ಗೆ ಯಾವಾಗಲೂ ಮಾತನಾಡುತ್ತಲೇ, ನಮ್ಮ ಹೃದಯವನ್ನು ಮನ್ನಣೆಗಳ ಮೇಲೆ ನೆಟ್ಟಿರಬಹುದು. ಸರಳತೆಯನ್ನು ಕೊಂಡಾಡುತ್ತಲೇ, ನಮ್ಮ ಹೃದಯವನ್ನು ಭೌತಿಕ ಸಂಪತ್ತಿನ ಮೇಲೆ ಇರಿಸಿರಬಹುದು. ಪ್ರೀತಿಯ ಬಗ್ಗೆ ಮಾತನಾಡುತ್ತಲೇ, ನಮ್ಮ ಗಮನವನ್ನು ಅಸಮಾಧಾನದೆಡೆಗೆ ಹರಿಸಿರಬಹುದು.

ಭಗವದ್ಗೀತೆಯು ಇದನ್ನು ಹೀಗೆ ವ್ಯಕ್ತಪಡಿಸುತ್ತದೆ[1]:

> ಶ್ರದ್ಧಾಮಯೋಽಯಂ ಪುರುಷೋ
> ಯೋ ಯಚ್ಛ್ರದ್ಧಃ ಸ ಏವ ಸಃ
>
> ವ್ಯಕ್ತಿಯು ತನ್ನ ಶ್ರದ್ಧೆಯಿಂದ ರೂಪುಗೊಂಡಿರುತ್ತಾನೆ;
> ಆತನ ಶ್ರದ್ಧೆಯ ಗುಣಮಟ್ಟ ಹೇಗಿರುವುದೊ, ಆತ ಹಾಗೆಯೆ ಆಗುತ್ತಾನೆ.

---

[1] ಭಗವದ್ಗೀತೆ, ಅಧ್ಯಾಯ 17 ಶ್ಲೋಕ 3

ಅಂದರೆ, ಶ್ರದ್ಧೆ ನಮ್ಮನ್ನು ರೂಪಿಸುತ್ತದೆ. ಹೃದಯ ಏನನ್ನು ಪದೇ ಪದೇ ಸ್ವೀಕರಿಸುತ್ತದೆಯೊ, ಅದು ಕ್ರಮೇಣವಾಗಿ ನಮ್ಮನ್ನು ನಿರ್ಮಿಸುತ್ತದೆ. ನಾವು ನಮ್ಮ ಗಮನ, ವಿಶ್ವಾಸ, ಆಕಾಂಕ್ಷೆ ಹಾಗು ಪ್ರೇಮದಿಂದ ಯಾವುದನ್ನು ಗೌರವಿಸುತ್ತೇವೊ, ಅದೇ ನಾವಾಗುತ್ತೇವೆ.

ಶ್ರದ್ಧೆಯು ಆರಂಭದಲ್ಲಿ ಆಸಕ್ತಿ, ಗೌರವ, ಆಕಾಂಕ್ಷೆ ಅಥವಾ ಪ್ರತಿದಿನ ಬೆಳಗ್ಗೆ ಕುಳಿತು ಅಂತರ್ಮುಖಿಯಾಗುವ ಸರಳ ಇಚ್ಛೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಪೋಷಣೆ ದೊರೆತಂತೆ ಅದು ಗಾಢವಾಗುತ್ತದೆ. ಒಂದು ಮನೋಭಾವವಾಗಿ ಆರಂಭವಾಗುವ ಇದು ಆಕರ್ಷಣೆಯಾಗಿ ಬದಲಾಗುತ್ತದೆ. ಆಕರ್ಷಣೆಯು ಆಪ್ತತೆಯಾಗಿ ಪರಿವರ್ತನೆಗೊಳ್ಳುತ್ತದೆ. ಈ ಆಪ್ತತೆಯು ಪ್ರೇಮಕ್ಕೆ ದಾರಿ ಮಾಡಿಕೊಡುತ್ತದೆ.

ಶ್ರದ್ಧೆ ಎಂದರೆ ಹೃದಯವು ತಾನೆಲ್ಲಿ ನೆಲೆಗೊಳ್ಳಬೇಕೆಂದು ಕಂಡುಕೊಳ್ಳುವುದು. ಪ್ರೇಮವು ತನ್ನ ನೆಲೆಯನ್ನು ಕಂಡುಕೊಂಡಾಗ ಹರಿಯತೊಡಗುತ್ತದೆ. ವಾಸ್ತವವಾಗಿ, ಅದು ತನ್ನನ್ನು ತಾನು ಪ್ರೇಮವೆಂದು ಗುರುತಿಸಿಕೊಳ್ಳುವ ಮುನ್ನ ಇರುವ ಸ್ಥಿತಿಯೇ ಶ್ರದ್ಧೆ ಎಂದೂ ನಾವು ಹೇಳಬಹುದು. 'ನಾನು ಅರಸುತ್ತಿರುವುದು ಎಲ್ಲಿದೆ?' ಎಂದು ತೀವ್ರ ಹಂಬಲವು ಪ್ರಶ್ನಿಸಿದಾಗ, ಆ ದಿಕ್ಕಿನತ್ತ ಹೃದಯವನ್ನು ಒಡ್ಡುವುದರ ಮೂಲಕ ಶ್ರದ್ಧೆ ಸ್ಪಂದಿಸುತ್ತದೆ. ಹೀಗೆ ಹೃದಯವನ್ನು ಪದೇ ಪದೇ ಆ ದಿಕ್ಕಿನಲ್ಲಿರಿಸಿದಾಗ, ಅದು ಅರಳುತ್ತದೆ. ಆಗ ಶ್ರದ್ಧೆಯು ಗ್ರಹಣಶೀಲತೆಯಾಗಿ ಪರಿವರ್ತಿತವಾಗುತ್ತದೆ.

## ಗ್ರಹಣಶೀಲತೆ - ಮುಕ್ತವಾಗುವ ಧೈರ್ಯ

ಮುಚ್ಚಿಕೊಂಡ ಹೃದಯವು, ಮುಚ್ಚಿದ ಮುಷ್ಟಿಯಂತೆಯೆ, ಏನನ್ನೂ ಸ್ವೀಕರಿಸುವುದಿಲ್ಲ.. ನಾವು ಕೃಪೆಯನ್ನು ಬೇಡುತ್ತ, ಪರಿವರ್ತನೆಗಾಗಿ ಪ್ರಾರ್ಥಿಸುತ್ತ, ಅತ್ಯುನ್ನತವಾದದ್ದನ್ನು ಅರಸುತ್ತ ಪ್ರತಿದಿನ ಬೆಳಿಗ್ಗೆ ಧ್ಯಾನದಲ್ಲಿ ಕುಳಿತುಕೊಳ್ಳಬಹುದು; ಆದರೂ ಆಂತರಿಕವಾಗಿ



ಶ್ರದ್ಧೆಯು ಆರಂಭದಲ್ಲಿ ಆಸಕ್ತಿ, ಗೌರವ, ಆಕಾಂಕ್ಷೆ ಅಥವಾ ಪ್ರತಿದಿನ ಬೆಳಗ್ಗೆ ಕುಳಿತು ಅಂತರ್ಮುಖಿಯಾಗುವ ಸರಳ ಇಚ್ಛೆಯ ರೂಪದಲ್ಲಿ ಕಾಣಿಸಿಕೊಳ್ಳಬಹುದು. ಪೋಷಣೆ ದೊರೆತಂತೆ ಅದು ಗಾಢವಾಗುತ್ತದೆ. ಒಂದು ಮನೋಭಾವವಾಗಿ ಆರಂಭವಾಗುವ ಇದು ಆಕರ್ಷಣೆಯಾಗಿ ಬದಲಾಗುತ್ತದೆ. ಆಕರ್ಷಣೆಯು ಆಪ್ತತೆಯಾಗಿ ಪರಿವರ್ತನೆಗೊಳ್ಳುತ್ತದೆ. ಈ ಆಪ್ತತೆಯು ಪ್ರೇಮಕ್ಕೆ ದಾರಿ ಮಾಡಿಕೊಡುತ್ತದೆ.

ನಮ್ಮ ಆದ್ಯತೆಗಳಿಗೆ ಬದ್ಧರಾಗಿರಬಹುದು. ಒಂದು ಪ್ರಯೋಗವಾಗಿ, ನಿಮ್ಮನ್ನು ನೀವು ಕೇಳಿಕೊಳ್ಳಿ, 'ನಾನು ಅಡಚಣೆಯಿಲ್ಲದ ಪರಿವರ್ತನೆ ಬಯಸುತ್ತೇನೆಯೆ, ನಿಯಂತ್ರಣವನ್ನು ಉಳಿಸಿಕೊಂಡು ಶರಣಾಗುತ್ತೇನೆಯೆ, ಸ್ವಭಾವಗಳನ್ನು ಮರುಹೊಂದಿಸದೆ ಅನಂತವನ್ನು ಬಯಸುತ್ತೇನೆಯೆ? ಬೇರೆ ರೀತಿಯಲ್ಲಿ ಹೇಳುವುದಾದರೆ, ನನ್ನ ನಿಯಮಗಳಿಗೆ ಬದ್ಧವಾಗಿರುವಂತೆ ದಿವ್ಯತೆ ನನಗೆ ಬೇಕೆ?'

ಶ್ರದ್ಧೆ ಕ್ರಮೇಣ ಇದನ್ನು ಬದಲಾಯಿಸುತ್ತದೆ. ನಂಬಿಕೆ ಆಳವಾಗುತ್ತದೆ, ಆದ್ದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಅಗತ್ಯವೂ ಕೂಡ ದುರ್ಬಲಗೊಳ್ಳುತ್ತದೆ. ಮುಂದಾಗುವುದನ್ನು ನಿಯಂತ್ರಿಸುವ ಯತ್ನವನ್ನು ನಾವು ಕಡಿಮೆ ಮಾಡುತ್ತೇವೆ. ಇದು ಗ್ರಹಣಶೀಲತೆ, ಆಂತರಿಕ ಲಭ್ಯತೆ, ಹೃದಯವು ತನಗಾಗಿ ಸೃಷ್ಟಿಸಲು ಸಾಧ್ಯವಾಗದ್ದನ್ನು ಸ್ವೀಕರಿಸುವ ಇಚ್ಛೆ. ನಾವು ದೈವೀ ಪ್ರವಾಹಕ್ಕೆ ಲಭ್ಯವಾಗುತ್ತೇವೆ. ಕೃಪೆ ದಯಪಾಲಿಸುವುದನ್ನು ಸ್ವೀಕರಿಸಲು ನಾವು ಆಂತರಿಕ ಕ್ಷೇತ್ರವನ್ನು ಸಿದ್ಧಪಡಿಸುತ್ತೇವೆ. ಇದೇ ಆಧ್ಯಾತ್ಮಿಕ ಸಾಧನೆಯ ಉದ್ದೇಶ.

## ಆಕ್ರಮಣಕಾರನಿಗಾಗಿ ಸಿದ್ಧತೆ

ಯಾವುದನ್ನು ನೀಡಲಾಗುತ್ತಿದೆಯೊ ಅದಕ್ಕಾಗಿ ಬಾಬೂಜಿಯವರು ಪರಿಪೂರ್ಣ ಚಿತ್ರಣವನ್ನು ಬಳಸಿದ್ದಾರೆ. ಅವರು 'ಆಕ್ರಮಣಕಾರ'ನಿಗಾಗಿ ಕ್ಷೇತ್ರವನ್ನು ಸಿದ್ಧಪಡಿಸುವ ಬಗ್ಗೆ ಹೇಳಿದ್ದಾರೆ. ಸಾಮಾನ್ಯವಾಗಿ, ಆಕ್ರಮಣಕಾರನನ್ನು ನಾವು ಸ್ವಾಗತಿಸುವುದಿಲ್ಲ, ಆದರೆ ಇಲ್ಲಿನ ಅರ್ಥ ಸಂಪೂರ್ಣ ಭಿನ್ನವಾಗಿದೆ. ಪರಿಸ್ಥಿತಿಗಳು ಅನುಕೂಲಕರವಾದಾಗ ಪ್ರೇಮ ಪ್ರವೇಶಿಸಿ, ಸ್ವಾಧೀನಪಡಿಸಿಕೊಳ್ಳುತ್ತದೆ. ಆಂತರಿಕ ಕ್ಷೇತ್ರ ಗ್ರಹಣಶೀಲವಾದ ನಂತರ, ಕೃಪೆಯು ಈ ಆಕ್ರಮಣದ ಚಾಲಕನಾಗುತ್ತದೆ. ಗ್ರಹಣಶೀಲತೆಗೆ ಸಿದ್ಧವಾಗುವಂತೆ, ಹೊಸ ಜೀವನವು ತನ್ನನ್ನು ತಾನು ನೆಲೆಗೊಳಿಸಿಕೊಳ್ಳಲು ಆಳವಾದ ಬೇರುಗಳನ್ನು ಕಿತ್ತುಹಾಕುತ್ತದೆ. ಆ ಬೇರುಗಳೆಂದರೆ, ನಮ್ಮ ನಿರೀಕ್ಷೆಗಳು, ಪೂರ್ವಗ್ರಹಗಳು, ಭಯಗಳು, ಇಷ್ಟಾನಿಷ್ಟಗಳು, ಸಂಗ್ರಹಿತ ಮುದ್ರೆಗಳು, ಸ್ವತಃ ನಮ್ಮ ಮೇಲಿನ ಆಗ್ರಹ ಮತ್ತು ಆಧ್ಯಾತ್ಮಿಕ ಜೀವನವು ನಮ್ಮ ಇಚ್ಛೆಗೆ ಅನುಗುಣವಾಗಿ ಅನಾವರಣಗೊಳ್ಳಬೇಕೆಂಬ ನಮ್ಮ ಬೇಡಿಕೆ.

ಕೃಪೆ ನಮಗಾಗಿ ಸದಾ ಕಾಯುತ್ತಿರುತ್ತದೆ. ನಮ್ಮನ್ನು ನಾವು ಲಭ್ಯವಾಗಿಸಿಕೊಳ್ಳಬೇಕು. ಕೃಪೆಯು ಇನ್ನೆಂದೂ ಪ್ರತಿರೋಧವನ್ನು ನೀಡದಿರುವ ನೆಲೆಯನ್ನು ಶ್ರದ್ಧೆ ನಮ್ಮೊಳಗೆ ಸಿದ್ಧಪಡಿಸುತ್ತದೆ. ನಂತರ ನಮ್ಮನ್ನು ನಾವು ಪ್ರೇಮಕ್ಕೆ ಒಪ್ಪಿಸುತ್ತೇವೆ. ಮೊದಲಿಗೆ


ನಾವು, 'ನಾನು ನಂಬುತ್ತೇನೆ' ಎನ್ನುತ್ತೇವೆ. ನಂತರ ನಾವು, 'ನಾನು ವಿಶ್ವಾಸವಿಡುತ್ತೇನೆ' ಎಂದು ಹೇಳುತ್ತೇವೆ. ಅದಾದ ನಂತರ, ವಿಶ್ವಾಸ ಅನಗತ್ಯವಾಗುತ್ತದೆ, ಏಕೆಂದರೆ ವಿಶ್ವಾಸವಿಡುವವನು ಮತ್ತು ವಿಶ್ವಾಸವಿಡುವ ವಸ್ತುವಿನ ನಡುವಿನ ಅಂತರ ಕಣ್ಮರೆಯಾಗುತ್ತದೆ. ಪ್ರೇಮವು ಆಕ್ರಮಣಕಾರನಾಗಿ ಪ್ರವೇಶಿಸಿ, ತನ್ನನ್ನು ಹೃದಯದ ಅಧಿಕೃತ ನಿವಾಸಿಯೆಂದು ಬಹಿರಂಗಪಡಿಸುತ್ತದೆ.

## ಪ್ರೇಮ ಮತ್ತು ವ್ಯವಹಾರ

ಆದರೆ ಸಾಮಾನ್ಯ ಬಗೆಯ ಪ್ರೀತಿಯಲ್ಲಿ ಬಹುತೇಕ ವ್ಯವಹಾರದ ಅಂಶವಿರುತ್ತದೆ. ನಾವು ಏನನ್ನಾದರೂ ನಿರೀಕ್ಷಿಸುತ್ತಲೇ ಕೊಡುತ್ತೇವೆ; ಆ ನಿರೀಕ್ಷೆಯು ಪ್ರಜ್ಞಾಪೂರ್ವಕವಲ್ಲದಿದ್ದರೂ ಕೂಡ. ವಾತ್ಸಲ್ಯವು ವಾತ್ಸಲ್ಯವನ್ನು ಬಯಸುತ್ತದೆ. ಗಮನವು ಗಮನವನ್ನು ಬಯಸುತ್ತದೆ. ತ್ಯಾಗವು ಮನ್ನಣೆಯನ್ನು ಬಯಸುತ್ತದೆ. ಕಾಳಜಿಯು ಕೃತಜ್ಞತೆಯನ್ನು ಬಯಸುತ್ತದೆ.

ಈ ವಿನಿಮಯವು ನಿರೀಕ್ಷೆಯಂತೆ ನಡೆದಾಗ ನಮಗೆ ಪ್ರೀತಿ ದೊರೆತಂತೆ ಅನ್ನಿಸುತ್ತದೆ. ಹಾಗಾಗದಿದ್ದಾಗ ನಾವು ನಿರಾಶೆಗೊಳ್ಳುತ್ತೇವೆ. ಇದು ಅಗತ್ಯವನ್ನು ಬೆರೆಸಿದ ಪ್ರೀತಿ. ಎಲ್ಲಿ ಅಗತ್ಯವಿರುವುದೊ, ಭಯವೂ ಹತ್ತಿರದಲ್ಲೇ ಇರುತ್ತದೆ. ಅದು ನಮ್ಮಲ್ಲಿರುವುದನ್ನು ಕಳೆದುಕೊಳ್ಳುವ ಭಯವಿರಬಹುದು, ನಾವು ಬಯಸಿದ್ದು ಸಿಗದಿರುವ ಭಯವಿರಬಹುದು, ಅಥವಾ ಮರೆತುಹೋಗುವ, ಬದಲಿಗೊಳ್ಳುವ, ತಿರಸ್ಕರಿಸಲ್ಪಡುವ ಅಥವಾ ಒಂಟಿಯಾಗುವ ಭಯವಿರಬಹುದು.

ಭಯ ಸಂಕುಚಿತಗೊಳಿಸುತ್ತದೆ, ಆದರೆ ಪ್ರೇಮ ವಿಸ್ತರಿಸುತ್ತದೆ. ಭಯ, "ನನಗೇನಾಗುವುದು?" ಎಂದು ಕೇಳುತ್ತದೆ, ಆದರೆ ಪ್ರೇಮಕ್ಕೆ ಅಂಥ ಪ್ರಶ್ನೆಯ ಅಗತ್ಯವಿರುವುದಿಲ್ಲ. ಭಯ ಗಡಿಗಳನ್ನು ನಿರ್ಮಿಸುತ್ತದೆ, ಪ್ರೇಮ ಗಡಿಗಳನ್ನು ಅಳಿಸುತ್ತದೆ. ಇಲ್ಲಿ ಶ್ರದ್ಧೆ ಇವೆರಡರ ನಡುವಿನ ಸೇತುವೆಯಾಗಿದೆ. ಭಯವು, "ನಿನ್ನನ್ನು ನೀನು ರಕ್ಷಿಸಿಕೊ" ಎಂದು ಹೇಳುತ್ತದೆ, ಆದರೆ ಶ್ರದ್ಧೆಯು "ನಿನ್ನನ್ನು ನೀನು ನಂಬು"



ಕೃಪೆ ನಮಗಾಗಿ ಸದಾ ಕಾಯುತ್ತಿರುತ್ತದೆ. ನಮ್ಮನ್ನು ನಾವು ಲಭ್ಯವಾಗಿಸಿಕೊಳ್ಳಬೇಕು. ಕೃಪೆಯು ಇನ್ನೆಂದೂ ಪ್ರತಿರೋಧವನ್ನು ನೀಡದಿರುವ ನೆಲೆಯನ್ನು ಶ್ರದ್ಧೆ ನಮ್ಮೊಳಗೆ ಸಿದ್ಧಪಡಿಸುತ್ತದೆ. ನಂತರ ನಮ್ಮನ್ನು ನಾವು ಪ್ರೇಮಕ್ಕೆ ಒಪ್ಪಿಸುತ್ತೇವೆ.

ಎಂದು ಪಿಸುಗುಡುತ್ತದೆ. ಸ್ವಯಂ-ರಕ್ಷಣೆಯಿಂದ ಸ್ವಯಂ-ಸಮರ್ಪಣೆಯೆಡೆಗಿನ ಈ ಪಯಣವು ಆಧ್ಯಾತ್ಮಿಕ ಜೀವನದ ಮಹತ್ತರವಾದ ಪರಿವರ್ತನೆಗಳಲ್ಲಿ ಒಂದಾಗಿದೆ. ಇದು ಹೃದಯವು ದೈವೀ ಕೃಪೆಯನ್ನು ಸ್ವೀಕರಿಸಲು ಸಿದ್ಧವಾಗುವಂತೆ ದಾರಿಯನ್ನು ಸುಗಮಗೊಳಿಸುತ್ತದೆ.

ನಿಜವಾದ ಪ್ರೇಮ ಒಂದು ಸೂಕ್ಷ್ಮ ಸ್ಥಿತಿಯಾಗಿದ್ದು, ಅದು ನಿಧಾನವಾಗಿ, ಮೌನವಾಗಿ ಮತ್ತು ಅನಾಮಿಕವಾಗಿ ಮಾಡಿದ ತೀವ್ರವಾದ ಆಂತರಿಕ ಸಾಧನೆಯ ಫಲ. ಇದಕ್ಕೆ ವ್ಯತಿರಿಕ್ತವಾಗಿ, ಪ್ರದರ್ಶಿತ ಪ್ರೇಮವು ಸಾಮಾನ್ಯವಾಗಿ ಕ್ಷೀಣಿಸುವ ಪ್ರೇಮವಾಗಿರುತ್ತದೆ. ಅದು ಪ್ರತಿಫಲವನ್ನು ಬಯಸಿದ ಕ್ಷಣವೇ, ಅದರಲ್ಲಿ ಅಹಂಕಾರದ ಛಾಯೆ ಮೂಡುತ್ತದೆ. ಗುಲಾಬಿ ಹೂವು ದಾರಿಹೋಕರ ಕಡೆಗೆ ತಿರುಗಿ, 'ನನ್ನ ಸುಗಂಧವನ್ನು ನೀವು ಗಮನಿಸಿದಿರಾ?' ಎಂದು ಕೇಳುವುದಿಲ್ಲ. ಸುಗಂಧ ಬೀರುವುದು ಅದರ ಸಹಜ ಸ್ವಭಾವ ಅಷ್ಟೆ.

## ಕರಗುವ ಬೇಲಿ

ಆಂತರಿಕ ಕ್ಷೇತ್ರದಲ್ಲಿರುವ ಅತಿ ಆಳವಾದ ಬೇರುಗಳು ಅಹಂಕಾರದ್ದಾಗಿರುತ್ತವೆ; ಅಂದರೆ, ಅಸ್ತಿತ್ವದ ವಿಶಾಲವಾದ ಮತ್ತು ಅಸೀಮಿತ ಕ್ಷೇತ್ರದಲ್ಲಿ ಒಂದು ಸಣ್ಣ ಭಾಗವನ್ನು ಬೇಲಿಯಿಂದ ಪ್ರತ್ಯೇಕಿಸಿಕೊಂಡು, ಜೀವನವಿಡೀ ಆ ಗಡಿಯನ್ನು ರಕ್ಷಿಸಿಕೊಳ್ಳುವುದೇ ಈ ಪ್ರತ್ಯೇಕಿತ 'ನಾನು' ಮಾಡುವ ಕೆಲಸ. ಆ ಬೇಲಿಯ ಒಳಗಿರುವ ಎಲ್ಲವೂ 'ನನ್ನದು' ಆಗಿರುತ್ತದೆ ಮತ್ತು ಹೊರಗಿರುವ ಎಲ್ಲವೂ ಅಪೇಕ್ಷಣೀಯ, ಭಯ ಹುಟ್ಟಿಸುವ, ಉಪಯುಕ್ತ ಅಥವಾ ಅಪ್ರಸ್ತುತ ವಿಷಯಗಳಾಗಿ ಕಾಣುತ್ತವೆ. ಪ್ರಜ್ಞೆಯು ಕುಂಠಿತಗೊಂಡು ಆ ಬೇಲಿಯೊಳಗೆ ಸೀಮಿತವಾದಾಗ ಅಹಂಕಾರ ಪ್ರಬಲವಾಗುತ್ತದೆ. ಬೇಲಿಯು ಇಲ್ಲದಾದಾಗ ಪ್ರೇಮ ಅರಳುತ್ತದೆ. ಜೊತೆಗೆ, ಹಾಗಾಗಲು ಪ್ರೇಮವು



ಭಯ ಗಡಿಗಳನ್ನು ನಿರ್ಮಿಸುತ್ತದೆ, ಪ್ರೇಮ ಗಡಿಗಳನ್ನು ಅಳಿಸುತ್ತದೆ. ಇಲ್ಲಿ ಶ್ರದ್ಧೆ ಇವೆರಡರ ನಡುವಿನ ಸೇತುವೆಯಾಗಿದೆ. ಭಯವು, "ನಿನ್ನನ್ನು ನೀನು ರಕ್ಷಿಸಿಕೊ" ಎಂದು ಹೇಳುತ್ತದೆ, ಆದರೆ ಶ್ರದ್ಧೆಯು "ನಿನ್ನನ್ನು ನೀನು ನಂಬು" ಎಂದು ಪಿಸುಗುಡುತ್ತದೆ. ಸ್ವಯಂ-ರಕ್ಷಣೆಯಿಂದ ಸ್ವಯಂ-ಸಮರ್ಪಣೆಯೆಡೆಗಿನ ಈ ಪಯಣವು ಆಧ್ಯಾತ್ಮಿಕ ಜೀವನದ ಮಹತ್ತರವಾದ ಪರಿವರ್ತನೆಗಳಲ್ಲಿ ಒಂದಾಗಿದೆ. ಇದು ಹೃದಯವು ದೈವೀ ಕೃಪೆಯನ್ನು ಸ್ವೀಕರಿಸಲು ಸಿದ್ಧವಾಗುವಂತೆ ದಾರಿಯನ್ನು ಸುಗಮಗೊಳಿಸುತ್ತದೆ.

ಬೇಲಿಯನ್ನು ನಾಶಪಡಿಸುವುದಿಲ್ಲ, ಬದಲಿಗೆ ಅದನ್ನು ಅನಗತ್ಯವಾಗಿಸುತ್ತದೆ.

ಪ್ರಜ್ಞೆಯು ಬೇಲಿಯಾಚೆಗೆ ವಿಸ್ತರಿಸಿದಾಗ, ಅದು 'ನಾನು'ವಿನಿಂದ 'ನಾವು' ಎಂಬುದರತ್ತ ಸಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ತಾನು ಯಾವುದನ್ನು ಅರಸುತ್ತಿತ್ತೋ ಅದರಿಂದಲೇ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿತ್ತು ಎಂಬುದು ಅದಕ್ಕೆ ಅರಿವಾಗುತ್ತದೆ. ಅಹಂಕಾರದ ಬೇಲಿಯು ಮೂಲಭೂತವಾಗಿ ಭಯದಿಂದ ನಿರ್ಮಿಸಲ್ಪಟ್ಟ ಬೇಲಿ. ಹಾಗಾದರೆ, ಆ ಬೇಲಿಯನ್ನು ಒಳಗಿನಿಂದ ಕರಗಿಸುವುದು ಯಾವುದು? ಅದುವೇ ಆತ್ಮೀಯತೆ. ಸೂರ್ಯನ ಬೆಳಕು ಬಿದ್ದಾಗ ಕಿಟಕಿಯ ಮೇಲಿನ ಹಿಮವು ಕರಗಿ ಹೋಗುವಂತೆಯೇ, ಪ್ರೇಮವು ಹೃದಯವನ್ನು ಬೆಚ್ಚಗಾಗಿಸಿ ಅಹಂಕಾರವನ್ನು ಕರಗಿಸುತ್ತದೆ.

## ಕಿಟಕಿ ಮತ್ತು ಬೆಳಕು

ನಾಲ್ಕು 'ಹಾರ್ಟ್‌ಫುಲ್‌ನೆಸ್' (Heartfulness) ಅಭ್ಯಾಸಗಳು ನಮ್ಮಲ್ಲಿ ಗ್ರಹಣಶೀಲತೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ.

### ಧ್ಯಾನವು ಬೆಳಕಿನೆಡೆಗೆ ಕಿಟಕಿಯನ್ನು ತೆರೆಯುತ್ತದೆ.

ಧ್ಯಾನದಲ್ಲಿ, ನಾವು ನಮ್ಮ ಗಮನವನ್ನು ಕೋಮಲವಾಗಿ ಹೃದಯದಲ್ಲಿರುವ ದೈವೀ ಪ್ರಕಾಶದ ಸನ್ನಿಧಿಯತ್ತ ತಿರುಗಿಸುತ್ತೇವೆ. ನಾವು ಯಾವುದೇ ಅನುಭವವನ್ನು ಬಲವಂತವಾಗಿ ಪಡೆಯಲು ಪ್ರಯತ್ನಿಸುವುದಿಲ್ಲ ಅಥವಾ ಯಾವುದೇ ಚಿತ್ರವನ್ನು ಕಲ್ಪಿಸಿಕೊಳ್ಳುವುದಿಲ್ಲ. ಬದಲಾಗಿ, ನಾವು ಆಂತರಿಕವಾಗಿ ಲಭ್ಯರಾಗುತ್ತೇವೆ.

### ಶುದ್ಧೀಕರಣ ಪ್ರಕ್ರಿಯೆಯು ಕಿಟಕಿಯ ಗಾಜಿನ ಮೇಲಿರುವ ಕೊಳೆಯನ್ನು ತೆಗೆದುಹಾಕುತ್ತದೆ.

ಕಾಲಕ್ರಮೇಣ, ಹಿಂದಿನ ಅನುಭವಗಳ ಮುದ್ರೆಗಳು, ಪ್ರವೃತ್ತಿಗಳು, ಭಾವನಾತ್ಮಕ ಹೊರೆಗಳು ಮತ್ತು ತೊಡಕುಗಳು ನಮ್ಮ ಗ್ರಹಿಕೆಯನ್ನು ಮಸುಕುಗೊಳಿಸುತ್ತವೆ. ಶುದ್ಧೀಕರಣ ಅವುಗಳನ್ನು ತೆಗೆದುಹಾಕುವುದರಿಂದ ಪ್ರಕಾಶವು ಹೆಚ್ಚು ಮುಕ್ತವಾಗಿ ಒಳಗೆ ಪ್ರವೇಶಿಸಲು ಸಾಧ್ಯವಾಗುತ್ತದೆ.

### ಪ್ರಾರ್ಥನೆಯು ವಿನಮ್ರತೆಯಿಂದ ದೈವೀ ಕೃಪೆಗೆ ಕಿಟಕಿಯನ್ನು ಸಂಪೂರ್ಣವಾಗಿ ತೆರೆಯುತ್ತದೆ.

ಆ ದಿವ್ಯಪ್ರಕಾಶ ನಮ್ಮದಲ್ಲ ಎಂಬುದನ್ನು ಪ್ರಾರ್ಥನೆ ಒಪ್ಪಿಕೊಳ್ಳುತ್ತದೆ. ಇದು ಸ್ವಯಂ-ಪರ್ಯಾಪ್ತತೆಯೆಂಬ ಭ್ರಮೆಯನ್ನು ತಗ್ಗಿಸುತ್ತದೆ ಮತ್ತು ವಿನಮ್ರತೆ, ಮುಕ್ತತೆ ಹಾಗು ನಮ್ಮ ಜ್ಞಾನಕ್ಕಿಂತಲೂ ಶ್ರೇಷ್ಠವಾದ ವಿವೇಚನೆಯಿಂದ ಮಾರ್ಗದರ್ಶನ ಪಡೆಯುವ ಇಚ್ಛಾಶಕ್ತಿಯೊಂದಿಗೆ ನಮ್ಮನ್ನು ಆ ಪರಮಸ್ರೋತದ ಎದುರು ನಿಲ್ಲಿಸುತ್ತದೆ.

**ನಿರಂತರ ಸ್ಮರಣೆಯು ದಿನವಿಡೀ ಕಿಟಕಿಯನ್ನು ದಿವ್ಯಪ್ರಕಾಶದ ಮೂಲದ ಕಡೆಗೇ ಇರುವಂತೆ ನೋಡಿಕೊಳ್ಳುತ್ತದೆ.**

ನಾವು ಕೆಲಸ ಮಾಡುವಾಗ, ಮಾತನಾಡುವಾಗ, ಸೇವೆ ಸಲ್ಲಿಸುವಾಗ, ಸೃಜನಶೀಲ ಕಾರ್ಯಗಳಲ್ಲಿ ತೊಡಗಿರುವಾಗ ಮತ್ತು ಇತರರ ಕಾಳಜಿ ಮಾಡುವಾಗಲೂ, ಹೃದಯ ತನ್ನ ಆಂತರಿಕ ದಿಕ್ಕನ್ನು ಕಾಯ್ದುಕೊಳ್ಳುತ್ತದೆ. ಶ್ರದ್ಧೆ ಸ್ಥಾಪಿಸಿದ ಆ ದಿಕ್ಕನ್ನು ಸ್ಮರಣೆ ಉಳಿಸಿಕೊಳ್ಳುತ್ತದೆ.

> ಧ್ಯಾನವು ದಿವ್ಯಪ್ರಕಾಶವನ್ನು ಆಹ್ವಾನಿಸುತ್ತದೆ.
> ಶುದ್ಧೀಕರಣವು ಅಡೆತಡೆಗಳನ್ನು ನಿವಾರಿಸುತ್ತದೆ.
> ಪ್ರಾರ್ಥನೆಯು ವಿನಮ್ರತೆಯಿಂದ ನಮ್ಮನ್ನು ಮೂಲದತ್ತ ತೆರೆಯುತ್ತದೆ.
> ನಿರಂತರ ಸ್ಮರಣೆಯು ಹೃದಯವನ್ನು ಪರಮಸ್ರೋತದ ದಿಕ್ಕಿನಲ್ಲೆ ನೆಲೆಗೊಳಿಸಿರುತ್ತದೆ.

ಧ್ಯಾನ ಮತ್ತು ಶುದ್ಧೀಕರಣಗಳು, ಹೃದಯದ ಸ್ಥಿತಿಯ ಮೇಲೆ ಕೆಲಸ ಮಾಡುತ್ತವೆ. ಪ್ರಾರ್ಥನೆಯು ಮೂಲದೊಂದಿಗೆ ನಮ್ಮ ಸಂಬಂಧವನ್ನು ಸ್ಥಾಪಿಸುತ್ತದೆ. ನಿರಂತರ ಸ್ಮರಣೆಯು ಹೃದಯದ ದಿಕ್ಕನ್ನು ಕಾಪಾಡುತ್ತದೆ, ಹಾಗು ಕೃಪೆಯು ಈ ಅಭ್ಯಾಸಗಳಲ್ಲಿ ಯಾವುದೂ ಸೃಷ್ಟಿಸಲಾರದುದನ್ನು ನೀಡುತ್ತದೆ.

## ಪ್ರಯತ್ನದಿಂದ ಕೃಪೆಯನ್ನು ಸೃಷ್ಟಿಸಲಾಗದು


ರೈತ ಮಳೆಯನ್ನು ಸೃಷ್ಟಿಸದ ಹಾಗೆ ನಾವು ಕೃಪೆಯನ್ನು ಸೃಷ್ಟಿಸುವುದಿಲ್ಲ. ರೈತ ಮಣ್ಣನ್ನು ಸಿದ್ಧಪಡಿಸುವಂತೆಯೆ, ನಾವು ಕೃಪೆಯನ್ನು ಸ್ವೀಕರಿಸಲು ಸಿದ್ಧರಾಗುತ್ತೇವೆ. ಅವನು ಕಲ್ಲುಗಳನ್ನು ತೆಗೆಯುತ್ತಾನೆ, ಭೂಮಿಯನ್ನು ಸಡಿಲಗೊಳಿಸುತ್ತಾನೆ, ಬೀಜಗಳನ್ನು ನೆಡುತ್ತಾನೆ ಮತ್ತು ಎಚ್ಚರದಿಂದ ಕಾಯುತ್ತಾನೆ. ಮಳೆ ಬರುವ ಕಾಲಕ್ಕೆ ನೆಲ ಸಿದ್ಧವಾಗಿರುತ್ತದೆ. ಆಧ್ಯಾತ್ಮಿಕ ಸಾಧನೆಯೆ ನಮ್ಮ ಸಿದ್ಧತೆ..

ಈ ವ್ಯತ್ಯಾಸವು ಎರಡು ದೋಷಗಳಿಂದ ನಮ್ಮನ್ನು ರಕ್ಷಿಸುತ್ತದೆ. ಮೊದಲನೆಯದು ಗರ್ವ; ನಮ್ಮ ಆಧ್ಯಾತ್ಮಿಕ ಸ್ಥಿತಿಯು ನಮ್ಮ ವೈಯಕ್ತಿಕ ಸಾಧನೆಯ ಫಲವೆಂಬ ನಂಬಿಕೆ. ಎರಡನೆಯದು ನಿಷ್ಕ್ರಿಯತೆ, ಕೃಪೆಯನ್ನು ನೀಡಲಾಗಿರುವುದರಿಂದ ಯಾವುದೇ ಸಿದ್ಧತೆ ಅಗತ್ಯವಿಲ್ಲ ಎಂಬ ನಂಬಿಕೆ. ಇವೆರಡೂ ಅಪೂರ್ಣ. ನಾವು ಪ್ರಾಮಾಣಿಕತೆಯಿಂದ ತಯಾರಿ ನಡೆಸುತ್ತೇವೆ, ಮತ್ತು ಕೃಪೆಯು ಕೇವಲ ಪ್ರಯತ್ನದಿಂದ ಎಂದಿಗೂ ಸಾಧಿಸಲಾಗದ್ದನ್ನು ಪೂರ್ಣಗೊಳಿಸುತ್ತದೆ.

## ಪ್ರಾಣಾಹುತಿ ಮತ್ತು ತುಂಬಿ ತುಳುಕುವ ಬಟ್ಟಲು

ಖಾಲಿ ಬಟ್ಟಲಿನಿಂದ ನೀರನ್ನು ಸುರಿಯಲು ಸಾಧ್ಯವಿಲ್ಲ. ಅಂತೆಯೆ, ಮಾನವ ಸಂಬಂಧಗಳಲ್ಲೂ ಕೂಡ, ನಮ್ಮಲ್ಲಿಲ್ಲದ್ದನ್ನು ನೀಡಲು ಸಾಧ್ಯವಿಲ್ಲ. ಆದರೂ ಜೀವನದ ಬಹುಪಾಲನ್ನು ಖಾಲಿತನದಿಂದ ಪ್ರೇಮಿಸುವುದರಲ್ಲೆ ಕಳೆಯುತ್ತೇವೆ; ನಾವೇ ಹತಾಶವಾಗಿ ಹುಡುಕುತ್ತಿರುವುದನ್ನು ನೀಡಲು ಪ್ರಯತ್ನಿಸುತ್ತೇವೆ. ಈ ಕಾರಣಕ್ಕಾಗಿಯೇ ಮಾನವ ಪ್ರೀತಿ ಸಾಮಾನ್ಯವಾಗಿ ದಣಿವುಂಟುಮಾಡುವಂಥದ್ದು. ಕೊಡುವುದೊಂದು ಪ್ರಯತ್ನ, ಏಕೆಂದರೆ ಕೊಡುವಿಕೆಯ ಮುಸುಕಿನಲ್ಲಿ ಸ್ವೀಕರಿಸುವ ಭರವಸೆ ಅಡಗಿದೆ. ಪ್ರೇಮಿಗಳು ಭಿಕ್ಷುಕರಾಗುತ್ತಾರೆ, ಪರಸ್ಪರ ಪ್ರೀತಿಯ ಭಿಕ್ಷೆಯನ್ನು ಬಯಸುತ್ತಾರೆ!

ಸ್ವೀಕರಿಸುವುದರೊಂದಿಗೆ ಆಧ್ಯಾತ್ಮಿಕ ಪ್ರೇಮ ಪ್ರಾರಂಭವಾಗುತ್ತದೆ. ಹಾರ್ಟ್‌ಫುಲ್‌ನೆಸ್ ಪದ್ಧತಿಯಲ್ಲಿ, ನಾವು ಧ್ಯಾನದಲ್ಲಿ ಕುಳಿತು ಪ್ರಾಣಾಹುತಿಯನ್ನುಸ್ವೀಕರಿಸುತ್ತೇವೆ. ಪ್ರತಿಯೊಂದು ಧ್ಯಾನದ ನಂತರವೂ, ಏನೋ ಒಂದು ಬಹುತೇಕ ಅಗ್ರಾಹ್ಯವಾಗಿ ಬದಲಾಗುತ್ತದೆ. ಬಟ್ಟಲು ತುಂಬುತ್ತದೆ. ಅದು ತುಂಬುತ್ತಿದ್ದಂತೆ, ಪ್ರೇಮವು ಸಹಜವಾಗಿಯೂ, ಅನಾಯಾಸವಾಗಿಯೂ ಉಕ್ಕಿ ಹರಿಯಲಾರಂಭಿಸುತ್ತದೆ. ಪೂರ್ಣತೆ ತನ್ನನ್ನು ವ್ಯಕ್ತಪಡಿಸುತ್ತದೆ. ಇದು ಪ್ರೇಮಕ್ಕಿರುವ ಪರಿವರ್ತನೆಯ ಶಕ್ತಿ. ಇದು ಎಲ್ಲದಕ್ಕೂ ಹೊಳಪು ನೀಡಿ, ಅತಿ ಶುಷ್ಕ ಹೃದಯದಲ್ಲೂ ಜೀವಂತಿಕೆ ತುಂಬುತ್ತದೆ. ಅದರ ಕಂಪನ ಶಕ್ತಿ ನಾವು ಸೃಷ್ಟಿಸುವಂಥದ್ದಲ್ಲ; ಬದಲಿಗೆ, ನಾವು ಸ್ವೀಕರಿಸುವ ಪ್ರೇಮ ವಾಹಿನಿಯಾಗುತ್ತೇವೆ.



ಧ್ಯಾನ ಮತ್ತು ಶುದ್ಧೀಕರಣಗಳು, ಹೃದಯದ ಸ್ಥಿತಿಯ ಮೇಲೆ ಕೆಲಸ ಮಾಡುತ್ತವೆ. ಪ್ರಾರ್ಥನೆಯು ಮೂಲದೊಂದಿಗೆ ನಮ್ಮ ಸಂಬಂಧವನ್ನು ಸ್ಥಾಪಿಸುತ್ತದೆ. ನಿರಂತರ ಸ್ಮರಣೆಯು ಹೃದಯದ ದಿಕ್ಕನ್ನು ಕಾಪಾಡುತ್ತದೆ, ಹಾಗು ಕೃಪೆಯು ಈ ಅಭ್ಯಾಸಗಳಲ್ಲಿ ಯಾವುದೂ ಸೃಷ್ಟಿಸಲಾರದುದನ್ನು ನೀಡುತ್ತದೆ.

ಪ್ರಗತಿಯನ್ನು ಮರುಪರಿಶೀಲಿಸೋಣ:


ತೀವ್ರಹಂಬಲವು ಹುಡುಕಾಟವನ್ನು ಜಾಗೃತಗೊಳಿಸುತ್ತದೆ.
ಶ್ರದ್ಧೆಯು ಹುಡುಕಾಟಕ್ಕೆ ದಿಸೆಯನ್ನು ನೀಡುತ್ತದೆ.
ಶ್ರದ್ಧೆಯು ಗ್ರಹಿಕೆಯನ್ನು ಗಹನವಾಗಿಸುತ್ತದೆ.
ಗ್ರಹಿಕೆಯು ಕೃಪೆಯನ್ನು ಸ್ವಾಗತಿಸುತ್ತದೆ.
ಕೃಪೆ ಹೃದಯವನ್ನು ತುಂಬುತ್ತದೆ.
ತುಂಬಿದ ಹೃದಯ ಪ್ರೇಮವಾಗಿ ಉಕ್ಕಿ ಹರಿಯುತ್ತದೆ.
ಪ್ರೇಮ ತನ್ನ ಮೂಲವನ್ನು ಗುರುತಿಸಿ, ಭಕ್ತಿಯಾಗುತ್ತದೆ.

## ತನ್ನ ಮೂಲವನ್ನು ಕಂಡುಕೊಂಡ ಪ್ರೇಮವೇ ಭಕ್ತಿ

ಒಮ್ಮೆ ಪ್ರೇಮ ಜಾಗೃತಗೊಂಡರೆ, ಅದು ನಮ್ಮ ಸಂಬಂಧಗಳು, ಕೆಲಸ, ನುಡಿ, ಸೇವೆ ಮತ್ತು ಜಗತ್ತನ್ನು ನೋಡುವ ದೃಷ್ಟಿಕೋನಗಳಲ್ಲಿಯೂ ತುಂಬಿಹರಿಯುತ್ತದೆ. ಅದು ನಿರ್ಣಾಯಕ ಮನೋಭಾವವನ್ನು ಮೆದುಗೊಳಿಸುವುದಲ್ಲದೆ, ಪ್ರತ್ಯೇಕತೆಯ ಗೋಡೆಗಳನ್ನು ದುರ್ಬಲಗೊಳಿಸುತ್ತದೆ. ಆಗ, ಇನ್ನೂ ಗಾಢವಾದ ಪ್ರಕ್ರಿಯೆಯೊಂದು ಪ್ರಾರಂಭವಾಗುತ್ತದೆ. ಪ್ರೇಮವು ತಾನೆಲ್ಲಿಂದ ಬಂದಿರುವೆನೆಂದು ನೆನಪಿಸಿಕೊಳ್ಳುತ್ತದೆ. ನದಿಯೊಂದು ಸಮುದ್ರದತ್ತ ಹರಿಯುವಷ್ಟೇ ಸಹಜವಾಗಿ ಅದು ತನ್ನ ಮೂಲದತ್ತ ತಿರುಗುತ್ತದೆ. ಈ ತಿರುವೇ ಭಕ್ತಿ. ಭಕ್ತಿ ಎಂದರೆ ಪ್ರೇಮ ತನ್ನ ಮೂಲವನ್ನು ಗುರುತಿಸಿ, ಸಂಪೂರ್ಣವಾಗಿ ಅದರತ್ತಲೇ ಹೊರಳುವುದು.

ಶ್ರದ್ಧೆ ಎಂದರೆ ಹೃದಯವು ತನ್ನ ಪ್ರಿಯತಮನ ದಿಕ್ಕಿನಲ್ಲಿ ತನ್ನನ್ನು ತಾನು ನೆಲೆಗೊಳಿಸುವುದು. ಪ್ರೇಮವೆಂದರೆ ಹೃದಯವು ಪ್ರಿಯತಮನನ್ನೇ ತುಂಬಿಕೊಳ್ಳುವುದು. ಭಕ್ತಿ ಎಂದರೆ ಹೃದಯವು ಕೇವಲ ಪ್ರಿಯತಮನಲ್ಲೇ ನೆಲೆಸಲು ಬಯಸುವುದು.

ತೀವ್ರ ಹಂಬಲ, ಶ್ರದ್ಧೆ, ಗ್ರಹಿಕೆ, ಕೃಪೆ, ಪ್ರೇಮ ಮತ್ತು ಭಕ್ತಿ, ಇವೆಲ್ಲವೂ ಪ್ರತ್ಯೇಕ ವಿಷಯಗಳಲ್ಲ. ಇವು ಜೀವನ ವಿಕಸನಗೊಳ್ಳುವ ಹಂತಗಳು; ಬೀಜ, ಬೇರು, ಕಾಂಡ, ಹೂವು ಮತ್ತು ಸುಗಂಧ ಹಾಗು ಆ ಸುಗಂಧವು ತನ್ನ ಮೂಲಕ್ಕೆ ಮರಳುವ ಮೂಲಕ ಸಸ್ಯವೊಂದು ಬೆಳೆಯುವ ಪ್ರಕ್ರಿಯೆಯಂತೆಯೇ ಇವು ಕೂಡ.



ಶ್ರದ್ಧೆ ಎಂದರೆ ಹೃದಯವು ತನ್ನ ಪ್ರಿಯತಮನ ದಿಕ್ಕಿನಲ್ಲಿ ತನ್ನನ್ನು ತಾನು ನೆಲೆಗೊಳಿಸುವುದು. ಪ್ರೇಮವೆಂದರೆ ಹೃದಯವು ಪ್ರಿಯತಮನನ್ನೇ ತುಂಬಿಕೊಳ್ಳುವುದು. ಭಕ್ತಿ ಎಂದರೆ ಹೃದಯವು ಕೇವಲ ಪ್ರಿಯತಮನಲ್ಲೇ ನೆಲೆಸಲು ಬಯಸುವುದು.

## ಮರಳುವಿಕೆಯ ನಿಯಮ

ಪ್ರಕೃತಿಯು ನಮಗೆ ಪ್ರೇಮದ ಮತ್ತೊಂದು ಗುಣವನ್ನು ಕಲಿಸುತ್ತದೆ. ಮಾವಿನ ಮರಕ್ಕೆ ಮಣ್ಣು, ಸೂರ್ಯಕಿರಣ, ನೀರು ಮತ್ತು ಸ್ವಲ್ಪ ಸಗಣಿ ಗೊಬ್ಬರದ ಅಗತ್ಯವಿರುತ್ತದೆ. ಈ ಸಾಮಾನ್ಯ ಕೊಡುಗೆಗಳಿಗೆ ಪ್ರತಿಯಾಗಿ ಅದು ರಸಭರಿತ ಸಿಹಿ, ಪರಿಮಳ, ಪೋಷಣೆ, ನೆರಳು ಮತ್ತು ಹೊಸ ಜೀವಕ್ಕೆ ಬೇಕಾದ ಅಸಂಖ್ಯಾತ ಸಾಧ್ಯತೆಗಳನ್ನು ನೀಡುತ್ತದೆ. ತೆಂಗಿನ ಮರವು ಮಣ್ಣು, ಮಳೆ, ಸೂರ್ಯನ ಬೆಳಕು ಮತ್ತು ಗಾಳಿಯಿಂದ ಪೋಷಕಾಂಶಗಳನ್ನು ಪಡೆದು, ತಾನು ಪಡೆದಿದ್ದಕ್ಕಿಂತಲೂ ಅತ್ಯಂತ ಶ್ರೇಷ್ಠವಾದ ಕೊಡುಗೆಗಳನ್ನಾಗಿ ಪರಿವರ್ತಿಸಿಕೊಳ್ಳುತ್ತದೆ. ಹಸುವಿಗೆ ಹುಲ್ಲು, ಮೇವು, ನೀರು, ಸೂರ್ಯನ ಬೆಳಕು, ಆರೈಕೆ ಮತ್ತು ಅಕ್ಕರೆಯ ಅಗತ್ಯವಿರುತ್ತದೆ. ಪ್ರತಿಯಾಗಿ, ಅದು ಪೌಷ್ಟಿಕ ಹಾಲನ್ನು ನೀಡುತ್ತದೆ.

ಪ್ರಕೃತಿಯು ಸರಳವಾದುದನ್ನು ಸ್ವೀಕರಿಸಿ, ಅದ್ಭುತವಾದುದನ್ನು ಮರಳಿಸುತ್ತದೆ.

ನಮ್ಮ ವಿಷಯವೇನು? ನಾವು ಅತ್ಯುತ್ತಮವಾದವುಗಳನ್ನು ಪಡೆಯುತ್ತೇವೆ ಸೂರ್ಯನ ಬೆಳಕು, ಗಾಳಿ, ನೀರು, ಅದ್ಭುತವಾದ ಶರೀರ, ಇತರರ ಅಕ್ಕರೆ, ನಮ್ಮ ಪೂರ್ವಜರ ಜ್ಞಾನ, ಪೋಷಕರು ಮತ್ತು ಶಿಕ್ಷಕರ ತ್ಯಾಗ, ಸಂಪದ್ಭರಿತ ಭೂಮಿ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಕೃಪೆಯ ಸಾಧ್ಯತೆ.

ಪ್ರತಿಯಾಗಿ ನಾವೇನು ನೀಡಬಲ್ಲೆವು? ನಾವು ಸೂರ್ಯನಿಗೆ ಬೆಳಕನ್ನಾಗಲಿ ಅಥವಾ ಮೋಡಗಳಿಗೆ ನೀರನ್ನಾಗಲಿ ಮರಳಿಸಲಾಗುವುದಿಲ್ಲ. ಕೃಪೆಯನ್ನು ಅದರ ಮೂಲಕ್ಕೇ ಮರಳಿಸುವ ಅಗತ್ಯವಿಲ್ಲ. ನಾವು ತುಂಬಿಕೊಡಬೇಕಾದ ಯಾವುದೇ ಕೊರತೆ ದೈವತ್ವದಲ್ಲಿಲ್ಲ. ನಮ್ಮ ಗಮನಕ್ಕೆ ಅರ್ಹವಾದ ಒಂದೇ ಒಂದು ಕೊಡುಗೆಯಿದೆ, ಅದೇನೆಂದರೆ ನಾವು ಪಡೆದಿದ್ದನ್ನು ಪರಿವರ್ತಿಸುವುದು.

ಮಾವಿನ ಮರವು ಗೊಬ್ಬರವನ್ನು ಸಿಹಿಯಾಗಿ, ತೆಂಗಿನ ಮರವು ಸಾಮಾನ್ಯ ನೀರನ್ನು ಪೋಷಕಾಂಶಯುಕ್ತ ಎಳನೀರಾಗಿ ಮತ್ತು ಹಸುವೊಂದು ಹುಲ್ಲನ್ನು ಹಾಲಾಗಿ ಪರಿವರ್ತಿಸುವಂತೆ, ನಾವೂ ಕೂಡ ಅಂತಹ ಪವಿತ್ರ ಪರಿವರ್ತನಾ ಸಾಮರ್ಥ್ಯವನ್ನು ಹೊಂದಿರಬೇಕು.

ನಾವು ನೋವನ್ನು ಪಡೆದು, ಕ್ಷಮೆಯನ್ನು ನೀಡಬಲ್ಲೆವೆ?
ನಾವು ಕೋಪವನ್ನು ಪಡೆದು, ತಿಳಿವಳಿಕೆಯನ್ನು ನೀಡಬಲ್ಲೆವೆ?
ನಮಗೆ ದ್ವೇಷ ಎದುರಾದಾಗ, ನಾವು ಅನುಕಂಪವನ್ನು ನೀಡಬಲ್ಲೆವೆ?
ನಮಗೆ ಜ್ಞಾನ ದೊರೆತಾಗ, ನಾವು ವಿವೇಕವನ್ನು ನೀಡಬಲ್ಲೆವೆ?
ನಮಗೆ ಸಮೃದ್ಧಿ ದೊರೆತಾಗ, ನಾವು ಉದಾರತೆಯನ್ನು ನೀಡಬಲ್ಲೆವೆ?
ನಮಗೆ ಕೃಪೆ ದೊರೆತಾಗ, ನಾವು ಪ್ರೀತಿಯನ್ನು ನೀಡಬಲ್ಲೆವೆ?

ಇದೇ ಮಾನವರಾಗಿ ಇರುವುದರ ಘನತೆ. ನಮ್ಮ ಮೂಲಕ ಹಾದುಹೋಗುವಾಗ ಜೀವನವು ಯಾವ ರೂಪವನ್ನು ಪಡೆಯುವುದೊ, ಅದರಲ್ಲಿ ನಮ್ಮ ಶ್ರೇಷ್ಠತೆಯಿದೆ. ಮರವು ತನ್ನ ಆಂತರಿಕ ಕ್ರಿಯೆಯ ಗುಣಮಟ್ಟವನ್ನು ತನ್ನ ಹಣ್ಣುಗಳ ಮೂಲಕ ಹೊರಹೊಮ್ಮಿಸುತ್ತದೆ; ನಾವೂ ಹಾಗೆಯೆ. ನಾವು ಆ ದಿವ್ಯತೆಗೆ ನಮ್ಮನ್ನು ಎಂತಹವರನ್ನಾಗಿ ರೂಪಿಸಲು ಅವಕಾಶ ನೀಡುತ್ತೇವೆ ಎಂಬುದಕ್ಕಾಗಿ ಅದು ಕಾಯುತ್ತಿರುತ್ತದೆ.

ಪ್ರೇಮ ನಮ್ಮ ಸಹಜ ಸ್ವಭಾವವಾದಾಗ, ಅದನ್ನು ಯಾರು ಗುರುತಿಸುತ್ತಾರೆ, ಯಾರು ಪ್ರತಿಯಾಗಿ ಪ್ರೇಮ ನೀಡುತ್ತಾರೆ ಅಥವಾ ಯಾರು ಮೆಚ್ಚುತ್ತಾರೆ ಎಂಬ ಚಿಂತೆ ಇರುವುದಿಲ್ಲ. ನಿಜವಾದ ಪ್ರೇಮಕ್ಕೆ ಸಾಕ್ಷಿಯ ಅಗತ್ಯವಿರುವುದಿಲ್ಲ; ಅದರ ಸುಗಂಧವೇ ಅದಕ್ಕೆ ಪ್ರಮಾಣ.

ಹೃತ್ಪೂರ್ವಕವಾಗಿ,
ಕಮಲೇಶ್



ಪೂಜ್ಯ ದಾಜಿಯವರ 71ನೇ ಜನ್ಮದಿನೋತ್ಸವದ ಸಂದರ್ಭದಲ್ಲಿ ನೀಡಿದ ಸಂದೇಶ
ಸೆಪ್ಟೆಂಬರ್ 28, 2026, ಕಾನ್ಹಾ ಶಾಂತಿವನಂ

## There's More Waiting For You

to go a little deeper

### HEARTFULNESS APP

A Quiet Place to Start

Carry your practice with you — download the free app and connect with a personal trainer anytime.

Free Download. Daily practice. Trainer always Available.

Heartfulnessapp.org

### MASTERCLASSES

Go Deeper at Home

Learn with Daaji relaxation, meditation, cleaning, and prayer through three freely offered video sessions.

Free Videos. Learn from Daaji. 3 classes.

Heartfulness.org/global/masterclass

### RETREAT

Time for Just You

Step away from the noise and into a peaceful weekend that quietly deepens everything.

Peaceful Setting. Deepen Practice. Weekend Stays.

Heartfulness.org/global/retreat

### HEARTSPOTS

Find a Centre Near You

Your nearest meditation centre is closer than you think at no cost.

6000+ Centres. Heartful Community. Free to Visit.

Heartspots.heartfulness.org

Scan to download the free app, always there when you need it.
Start with a guided session, and let the practice find its own rhythm in you.
The journey inward begins with a single, still moment.



heartfulness
purity weaves destiny